**PW_9**

## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ

## ಸಿ.ಸಿ.2350/2021

| | | |
|---|---|---|
| ಸಾಕ್ಷಿದಾರರ ಹೆಸರು | - ಕೆಂಚಪ್ಪ | PW:9 |
| ತಂದೆಯ ಹೆಸರು | - ನಾಗೇಂದ್ರಪ್ಪ | CW:28 |
| ವಯಸ್ಸು | - 47 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - ಸಿ ಹೆಚ್ ಸಿ , ಮುಖ್ಯ ಪೇದೆ | ದಿ: 09/07/2026 |
| ವಾಸ | - ಚಿತ್ರದುರ್ಗ | |

### ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

1. 2009 ರಿಂದ 2014 ರವರೆಗೆ ಚಿತ್ರದುರ್ಗದ ನಗರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕಾರ್ಯನಿರ್ವಹಿಸುತಿದ್ದೆ ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ27.02.2012 ರಂದು ಮದ್ಯಾಹ್ನ 3.20 ರ ಸಮಯಕ್ಕೆ ಚಾಸಾ.35 ರವರೊಟ್ಟಿಗೆ ನಾನು ಮತ್ತು ಚಾಸಾ.29 ರಿಂದ 31 ರವರುಗಳು ಠಾಣೆಯಲ್ಲಿದ್ದು ಆರೋಪಿಗಳ ಪತ್ತೆಗಾಗಿ ಮತ್ತು ದಾಳಿಗೆ ಸಂಬಂದಿಸಿದಂತೆ ಚಾಸಾ.35 ಕರೆದಿದ್ದು ಅವರೊಟ್ಟಿಗೆ ಚಿತ್ರದುರ್ಗದ ಸರ್ಕಾರಿ ವಿಜ್ಞಾನ ಕಾಲೇಜಿನ ಆವರಣದ ಬಳಿ ಮದ್ಯಾಹ್ನ 3.45 ರ ಸಮಯಕ್ಕೆ ಹೋಗಿದ್ದೆವು.

2. ಸ್ತಳದಲ್ಲಿ ಆರೋಪಿಗಳು 4 ಜನ ಅಂದರೆ ಶ್ರೀರಂಗ ಅಂದರೆ 2 ನೇ , 5 ನೇ , 6 ನೇ , 7 ನೇ ಆರೋಪಿಗಳು ಇದ್ದು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು ಸುತ್ತುವರೆದು ವಶಕ್ಕೆ ಪಡೆದಿದ್ದೆವು. ಆರೋಪಿಗಳ ಜೊತೆ ಚಾಸಾ.35 ಮತ್ತು ನಾವೆಲ್ಲ ಠಾಣೆಗೆ ಮರಳಿದ್ದೆವು . ಆ ದಿನ ಸುತ್ತುವರೆದು ವಶಕ್ಕೆ ಪಡೆದ ಆರೋಪಿಗಳನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. ಓರ್ವ

**PW_9**

ಆರೋಪಿ ಹಾಜರಿಲ್ಲ ಎಂದು ನುಡಿದಿದ್ದು ಅಬಿಯೋಜಕರು 6 ನೇ ಆರೋಪಿ ಮೃತಪಟ್ಟಿರುವುದಾಗಿ ನುಡಿದಿರುತ್ತಾರೆ. ಈ ಸಂಬಂದ ಚಾಸಾ.35 ರವರು ವಿಚಾರಣೆ ಮಾಡಿದ್ದು ಹೇಳಿಕೆ ನೀಡಿರುತ್ತಾರೆ.

**ಪಾಟೀ ಸವಾಲು 3 ಮತ್ತು 7 ನೇ ಆರೋಪಿತರ ಪರ ಶ್ರೀ ಎಸ್ ಎನ್ ಎಸ್ ವಕೀಲರಿಂದಃ**

3. ಆ ದಿನ ಚಾಸಾ.35 ರವರ ಜೊತೆ ನಾನಾಗಲಿ , ಇತರೆ ಸಿಬ್ಬಂದಿಯಾಗಲಿ ಮಾಹಿತಿ ಮೇರೆಗೆ ಸರ್ಕಾರಿ ವಿಜ್ಞಾನ ಕಾಲೇಜ್ ಬಳಿ ಹೋಗಿಲ್ಲ ಯಾವುದೇ ಆರೋಪಿಗಳು ಸ್ತಳದಲ್ಲಿ ಇರಲಿಲ್ಲ ನಮ್ಮನ್ನು ಓಡಿ ಹೋಗಲು ಪ್ರಯತ್ನ ಮಾಡಲಿಲ್ಲ ಆ ದಿನ ಯಾವುದೇ ಆರೋಪಿಗಳನ್ನು ವಶಕ್ಕೆ ಪಡೆದಿರಲಿಲ್ಲ , ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಇಂದೇ ನೋಡುತ್ತಿರುವುದು ಆ ದಿನ 3 ಮತ್ತು 7 ನೇ ಆರೋಪಿ ಸ್ತಳದಲ್ಲಿ ಇರಲಿಲ್ಲ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಚಾಸಾ.35 ವಿಚಾರಣೆ ಮಾಡಿಲ್ಲ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಯನ್ನು ವಶಕ್ಕೆ ಪಡೆದ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. 3 ನೇ ಆರೋಪಿಯನ್ನು ಆ ದಿನ ವಶಕ್ಕೆ ಪಡೆದೇ ಇಲ್ಲ ಎಂದರೆ ಸರಿ .

**ಪಾಟೀ ಸವಾಲು 5 ನೇ ಆರೋಪಿ ಪರ ಶ್ರೀ ಡಿ ಕೆ ಎಸ್ ವಕೀಲರಿಂದಃ**

4. ದಿಃ27.02.2012 ರ ಕಾಲಕ್ಕೆ ಪ್ರವೀಣ್ ತಿಕಾರಿಯನ್ನು ಆರೋಪಿಯಾಗಿ ಕಾಣಿಸಿರಲೇ ಇಲ್ಲ ನಂತರ ಅಂತಿಮ ವರದಿಯಲ್ಲಿ ಕಾಣಿಸಿದ್ದು ಎಂದರೆ ಇರಬಹುದು. ಚಾಸಾ.35 ಆರೋಪಿಗಳ ಪತ್ತೆ ಮತ್ತು ದಾಳಿಗೆ ಹೋಗುವ ಸಂಬಂದ ನನ್ನನ್ನು ಮತ್ತು ಇತರೆ ಸಿಬ್ಬಂದಿಗಳನ್ನು ಕರೆದುಕೊಂಡು ಹೋದ ಬಗ್ಗೆ ಠಾಣಾ ಪುಸ್ತಕದಲ್ಲಿ ನಮೂದು ಇರುತ್ತದೆ. ಆರೋಪಿಗಳನ್ನು ವಶಕ್ಕೆ ಪಡೆದ ಸಂಬಂದ ಸ್ತಳದಲ್ಲಿ ಯಾವುದೇ ಪಂಚನಾಮೆ ಮಾಡಿರಲಿಲ್ಲ ಮತ್ತು ಪೊಟೊ ಸಹ ತೆಗೆದಿರಲಿಲ್ಲ. 5 ನೇ ಆರೋಪಿಯನ್ನು

**PW_9**

ವಿಜ್ಞಾನ ಕಾಲೇಜ್ ಚಿತ್ರದುರ್ಗದ ಬಳಿ ವಶಕ್ಕೆ ಪಡೆದಿಲ್ಲ ಬದಲಿಗೆ ಆತ ಹೆಚ್ ಡಿ ಎಫ್ ಸಿ ಬ್ಯಾಂಕ್ ಮ್ಯಾನೇಜರ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತಿದ್ದು ಕೆಲಸ ಇದೆ ಈ ಕೇಸಿಗೆ ಸಂಬಂದಿಸಿದಂತೆ ಮಾಹಿತಿ ಬೇಕು ಬನ್ನಿ ಎಂದು ಕರೆಸಿ ವಶಕ್ಕೆ ಪಡೆದಿದ್ದು ಎಂದರೆ ಸರಿಯಲ್ಲ. ಚಾಸಾ.39 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು2 ಮತ್ತು 4 ನೇ ಆರೋಪಿ ಪರ ಶ್ರೀಮತಿ ಪಿ ಪಿ ಆರ್ ವಕೀಲರಿಂದಃ**

5. 2 ಮತ್ತು 4 ನೇ ಆರೋಪಿಗಳನ್ನು ಆ ದಿನ ವಶಕ್ಕೆ ಪಡೆದಿಲ್ಲ ಎಂದರೆ ಸಾಕ್ಷಿ 2 ನೇ ಆರೋಪಿಯನ್ನು ವಶಕ್ಕೆ ಪಡೆದಿದ್ದೇವೆ 4 ನೇ ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಎಂದು ನುಡಿಯತ್ತಾರೆ. 5 ನೇ ಆರೋಪಿ ಪರ ಮಾಡಿದ ಪಾಟೀಸವಾಲನ್ನೆ ಮುಂದುವರೆದ ಪಾಟೀಸವಾಲಾಗಿ ಅಳವಡಿಸಿಕೊಳ್ಳಬಹುದು ಎಂದು ನುಡಿದಿದ್ದು ಅಳವಡಿಸಿಕೊಳ್ಳಲಾಗಿದೆ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**